# ಕಾಲ್ಗೆಜ್ಜೆ ನಾದವು



ಕಾಲ್ಗೆಜ್ಜೆ, ಕಾಲಂದುಗೆಯನ್ನು ಬೆಳ್ಳಿ, ಬಂಗಾರ, ಆಕ್ಸಿಡೈಸ್ಡ್‌ನಿಂದ ಹಿಡಿದು ಬರೀ ಮಣಿಗಳಿಂದಲೂ ತರಹೇವಾರಿಯಾಗಿ ತಯಾರಿಸಲಾಗುತ್ತದೆ.

■ ರೂಪಾ ಕೆ.ಎಂ.

ಕಾಲ್ಗೆಜ್ಜೆ ನಾದವು ಒಂದು ತೆರನಾದ ಸಕಾರಾತ್ಮಕ ಅಲೆಗಳನ್ನು ಎಬ್ಬಿಸುವ ಆಭರಣ. ಪುಟ್ಟ ಹೆಣ್ಣುಮಗುವಿಗೆ ತೊಡಿಸುವ ಕಾಲ್ಗೆಜ್ಜೆಯಿಂದ, ಆ ಮಗುವಿನಲ್ಲಿ ಪುಟಿಯುವ ಉತ್ಸಾಹವು ಅದರ ಹೆಜ್ಜೆ ಸಪ್ಪಳದೊಂದಿಗೆ ಮನೆಯೆಲ್ಲ ಪಸರಿಸಿದ ಅನುಭವ. ಕಾಲ್ಗೆಜ್ಜೆ, ಕಾಲಂದುಗೆಯನ್ನು ಬೆಳ್ಳಿ, ಬಂಗಾರ, ಆಕ್ಸಿಡೈಸ್ಡ್‌ನಿಂದ ಹಿಡಿದು ಬರೀ ಮಣಿಗಳಿಂದಲೂ ತರಹೇವಾರಿಯಾಗಿ ತಯಾರಿಸಲಾಗುತ್ತದೆ.

ಈಗೀಗ ಕಾಲಿಗೆ ತೊಡುವ ಈ ಆಭರಣಕ್ಕೆ ಗೆಜ್ಜೆಯೇ ಇರಬೇಕಾಗಿಲ್ಲ. ಸಪ್ಪಳವೇ ಮಾಡದ ಬಹಳ ಸರಳವೆನಿಸುವ ಆ್ಯಂಕಲ್ ಚೈನ್‌ಗಳೂ ಯುವಪೀಳಿಗೆಯನ್ನು ಆಕರ್ಷಿಸುತ್ತಲೇ ಇದೆ. ಈಗೀಗ 'ದೃಷ್ಟಿ' ತಾಕದಿರಲೆಂದು ಕಪ್ಪು ದಾರವನ್ನು ಎಡಗಾಲಿಗೆ ಕಟ್ಟಲಾಗುತ್ತದೆ. ಆ ದಾರಕ್ಕೆ ಗಾಢ ಹಾಗೂ ತಿಳಿ ನೀಲಿ ಬಣ್ಣದಿಂದ ತಯಾರಿಸಲಾದ 'ಇವಿಲ್ ಐ' ಚಿಕ್ಕ ಚಿಕ್ಕ ಮಣಿ ಹಾಗೂ ಪೆಂಡೆಂಟ್‌ಗಳನ್ನು ಸೇರಿಸಿ ಧರಿಸಲಾಗುತ್ತದೆ.

- ಮಿನಿಮಲಿಸ್ಟ್: ಸರಳ ಹಾಗೂ ಸೂಕ್ಷ್ಮವಾದ ಸರಪಳಿಯಂಥ ವಿನ್ಯಾಸದಿಂದ ತಯಾರಿಸಿರುವ ಈ ಮಿನಿಮಲಿಸ್ಟ್ ಕಾಲ್ಗೆಜ್ಜೆಯನ್ನು ಬೆಳ್ಳಿ ಅಥವಾ ಚಿನ್ನದ ಲೇಪನದಿಂದ ಮಾಡಲಾಗಿರುತ್ತದೆ. ನಿತ್ಯ ಬಳಕೆಗೆ ಇದು ಸೂಕ್ತವಾಗಿದ್ದು, ಸಣ್ಣ ಸಣ್ಣ ಗೆಜ್ಜೆ ಇರುವ ಈ ಚೈನ್ ನಡೆದಾಗೆಲ್ಲ ಸಣ್ಣ ಸದ್ದು ಹೊರಡಿಸುತ್ತದೆ.
- ಕ್ರಿಸ್ಟಲ್ ಕಾಲ್ಗೆಜ್ಜೆಗಳು: ಪಾರದರ್ಶಕವಾಗಿರುವ ಸ್ಫಟಿಕ ಹಾಗೂ ಇತರೆ ಹೊಳೆಯುವ ಹರಳುಗಳಿಂದ ಮಾಡಿದ ಗೆಜ್ಜೆಗಳಿವು. ಬಹು ಹೊಳಪಿನಿಂದ ಕೂಡಿರುವ ಇದನ್ನು ತೊಡುವುದರಿಂದ ದುಬಾರಿ ಲುಕ್ ಸಿಗುತ್ತದೆ.
- ಮಣಿಗಳ ಕಾಲ್ಗೆಜ್ಜೆ: ಬಣ್ಣ ಬಣ್ಣದ ಮಣಿಗಳಿರುವ ಕಾಲ್ಗೆಜ್ಜೆಗಳು ಈಗೀಗ ಹೆಚ್ಚು ಟ್ರೆಂಡ್ ಆಗುತ್ತಿವೆ. ದೊಡ್ಡ ಮಣಿಯನ್ನು ಬೇರೆ ಬೇರೆ ಆಕಾರಗಳಲ್ಲಿ ನೋಡಬಹುದು. ಮಣಿಗಳ ಜತೆಗೆ ಬೆಳ್ಳಿಯ ಕಟ್ಟು ಹಾಕಿಸಿ ಮಾಡಲಾಗುತ್ತದೆ. ಸದ್ಯಕ್ಕೆ ಕಾಮನಬಿಲ್ಲಿನ ಬಣ್ಣದಲ್ಲಿರುವ ಮಣಿಗಳ ಕಾಲ್ಗೆಜ್ಜೆಗೆ ಉತ್ತಮ ಬೇಡಿಕೆ ಇದೆ.
- ಕ್ಯೂಬನ್ ಲಿಂಕ್: ಕ್ಯೂಬನ್ ಲಿಂಕ್ ಗೆಜ್ಜೆಗಳು ದಪ್ಪ ವಿನ್ಯಾಸದಲ್ಲಿ ಇರುತ್ತವೆ. ಆದರೆ, ತೊಟ್ಟರೆ ಬಹಳ ಮುದ್ದಾಗಿ ಕಾಣುತ್ತವೆ. ಗೆಜ್ಜೆ ಇಲ್ಲದಿರುವ ಕ್ಯೂಬನ್ ಲಿಂಕ್ ಗೆಜ್ಜೆಗಳಿಗೆ ಹೆಚ್ಚು ಬೇಡಿಕೆ ಇದೆ.
- ಸಾಂಪ್ರದಾಯಿಕ ಗೆಜ್ಜೆಗಳು: ಇವುಗಳನ್ನು ಹೆಚ್ಚಾಗಿ ಬೆಳ್ಳಿಯಿಂದಲೇ ತಯಾರಿಸಲಾಗುತ್ತದೆ. ಸಣ್ಣ ಸಣ್ಣ ಗಂಟೆಯ ಗೊಂಚಲುಗಳನ್ನು ಹೊಂದಿರುವುದರಿಂದ ಭಾರವಾಗಿರುತ್ತದೆ. ಮದುವೆಯ ಸಂದರ್ಭದಲ್ಲಿ ವಧು ಕಡ್ಡಾಯವಾಗಿ ಇಂಥ ಸಾಂಪ್ರಾದಾಯಿಕ ಗೆಜ್ಜೆಯನ್ನು ತೊಡುತ್ತಾಳೆ.
- ಲೇಯರ್ಡ್ ಆ್ಯಂಕ್ಲೆಟ್‌ಗಳು: ತೆಳು ಕ್ಯೂಬನ್ ಲಿಂಕ್ ಇರುವ ಗೆಜ್ಜೆಗಳನ್ನು ತೊಟ್ಟು, ಅದರ ಜತೆಗೆ ಸಣ್ಣ ಬೇರೆ ಬೇರೆ ಬಣ್ಣದ ಮಣಿಗಳಿರುವ ಸರವನ್ನು ತೊಟ್ಟು ಲೇಯರ್ಡ್ ಆ್ಯಂಕ್ಲೆಟ್‌ಗಳಾಗಿ ಹೊಂದಿಸಿಕೊಂಡು ತೊಡಲಾಗುತ್ತದೆ. ಇನ್ನು ಕೆಲವು ವಿನ್ಯಾಸದಲ್ಲಿ ಒಟ್ಟಿಗೆ ಒಂದೇ ವಿನ್ಯಾಸದ ಲೇಯರ್ಡ್ ಆ್ಯಂಕ್ಲೆಟ್‌ಗಳನ್ನು ನೋಡಬಹುದು. ಹಲವು ಪದರಗಳ ಈ ಕಾಲ್ಗೆಜ್ಜೆ ಸುಕೋಮಲ ಕಾಲುಗಳಿಗೆ ಚೆನ್ನಾಗಿ ಒಪ್ಪುತ್ತದೆ.
- ಶೆಲ್ ಆ್ಯಂಕ್ಲೆಟ್‌ಗಳು: ಸಮುದ್ರದಲ್ಲಿ ಹೇರಳವಾಗಿ ಸಿಗುವ ಕಪ್ಪೆಚಿಪ್ಪುಗಳನ್ನು ಬಳ್ಳಿ ಹಾಗೂ ದಾರ ಬಳಸಿ, ಕಾಲ್ಗೆಜ್ಜೆ ಮಾಡಲಾಗುತ್ತದೆ. ಚಿಪ್ಪಿನ ಗಾತ್ರ ಮತ್ತು ಅದನ್ನು ಯಾವುದರ ಜತೆ ನೇಯಲಾಗಿದೆ ಎಂಬುದರ ಮೇಲೆ ಶೆಲ್ ಆ್ಯಂಕ್ಲೆಟ್‌ಗಳ ಟ್ರೆಂಡ್ ಆಗುತ್ತದೆ. ಬೊಹೊಮಿಯಾ ಪರಿಕಲ್ಪನೆಯಲ್ಲಿ ಶೆಲ್ ಆ್ಯಂಕ್ಲೆಟ್‌ಗಳಿಗೆ ಉತ್ತಮ ಬೇಡಿಕೆ ಇದೆ. ■

## ಟ್ರೆಂಡಿ ಕಾಲ್ಗೆಜ್ಜೆ...

ಇಂದಿನ ಫ್ಯಾಷನ್ ಪ್ರಪಂಚದಲ್ಲಿ ಟ್ರೆಂಡಿ ಕಾಲ್ಗೆಜ್ಜೆಗಳಿಗೆ ಎಲ್ಲಿಲ್ಲದ ಬೇಡಿಕೆ. ಸೀಶೆಲ್ ಕಾಲ್ಗೆಜ್ಜೆ, ವುಡನ್ ಬೀಡ್ಸ್‌ನಿಂದ ಮಾಡಿದ್ದು, ಪ್ಲಾಸ್ಟಿಕ್ ಬೀಡ್ಸ್ ಕಾಲ್ಗೆಜ್ಜೆ, ಹರಳುಗಳು, ಕುಂದನ್‌ಗಳಿಂದ ತಯಾರಿಸಿದ ಕಾಲ್ಗೆಜ್ಜೆ, ಗೋಲ್ಡ್ ಕವರಿಂಗ್ ಕಾಲ್ಗೆಜ್ಜೆ, ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ಗೆಜ್ಜೆಗಳು ಟ್ರೆಂಡಿ ಎನಿಸಿವೆ. ಚಿಪ್ಪುಗಳಿಂದ ಮಾಡಿದ ಕಾಲ್ಗೆಜ್ಜೆ ಸೀರೆ ಹಾಗೂ ಎಲ್ಲ ರೀತಿಯ ಉಡುಪುಗಳಿಗೆ ಮ್ಯಾಚ್ ಆಗುತ್ತದೆ. ಕಡಿಮೆ ದರದಲ್ಲೂ ಸಿಗುತ್ತದೆ.

ವುಡನ್ ಬೀಡ್ಸ್‌ನಿಂದ ಮಾಡಿದ ಕಾಲ್ಗೆಜ್ಜೆ ನೋಡಲು ಆಕರ್ಷಕ. ಬಣ್ಣ ಬಣ್ಣದ, ವಿವಿಧ ಆಕಾರದ ವುಡನ್ ಬೀಡ್ಸ್‌ನಿಂದ ತಯಾರಿಸಿದ ಗೆಜ್ಜೆಗಳು ಹಗುರವಾಗಿಯೂ ಇರುತ್ತವೆ. ಹಾಗೆಯೇ ಪ್ಲಾಸ್ಟಿಕ್ ಬೀಡ್ಸ್‌ನಿಂದ ಮಾಡಿದ ಕಾಲ್ಗೆಜ್ಜೆ ವಿಭಿನ್ನ ವಿನ್ಯಾಸ ಹಾಗೂ ಬಣ್ಣಗಳಲ್ಲಿ ಸಿಗುತ್ತದೆ. ಬೆಲೆಯೂ ಕಡಿಮೆ, ಹಗುರವಾಗಿಯೂ ಇರುತ್ತದೆ. ಬಣ್ಣಬಣ್ಣದ ಹರಳುಗಳಿಂದ, ಕುಂದನ್, ಮುತ್ತುಗಳಿಂದ ಮಾಡಿದ ಕಾಲ್ಗೆಜ್ಜೆ ಸಾಂಪ್ರದಾಯಿಕ ಉಡುಗೆಗಳಿಗೂ ಮ್ಯಾಚ್ ಆಗುವಂತಿವೆ. ವಿವಿಧ ಹಣ್ಣು, ತರಕಾರಿಗಳ ಬೀಜದಿಂದ ಮಾಡಿದ ನೈಸರ್ಗಿಕ ಕಾಲ್ಗೆಜ್ಜೆಗಳು ಈಗೀಗ ಫ್ಯಾಷನ್ ಎನಿಸಿವೆ.